# ಏನಿದು ಬರಿ ಮಣ್ಣಿನ ಮುದ್ದೆಯೇ?

ಲಲಿತ ಮಂಜುನಾಥ್

ಕಲಿಕೆಯಲ್ಲಿ ಆಸಕ್ತಿ ಮೂಡಿಸುವಂಥ ಪರಿಸರವನ್ನು ಸೃಷ್ಟಿಸ ಬಯಸುವ ಯಾವುದೇ ಶಾಲೆ ತನ್ನ ಆವರಣದಲ್ಲಿ ಮಕ್ಕಳು ತಮ್ಮ ಕೈಯ್ಯಾರೆ ಮಾಡಿ ಕಲಿಯುವ ಕಾರ್ಯಕ್ಕೆ ಒಂದಷ್ಟು ಜಾಗವನ್ನು ಮುಡಿಪಾಗಿ ಇಡಬೇಕಾಗುತ್ತದೆ. ಒಂದು ಕರಕುಶಲ ಕಲೆಯ ಆವರಣ ಅಥವಾ ಕೇಂದ್ರವು ಅನೇಕ ವಸ್ತುಗಳನ್ನು ಸಾಧ್ಯತೆಗಾಗಿ ಹುಡುಕಿ ಪರೀಕ್ಷಿಸಿ ನೋಡಲು ಸಂಪದ್ಭರಿತ ಸಂಪನ್ಮೂಲವನ್ನು ಒದಗಿಸುತ್ತದೆ ಮತ್ತು ಎಳೆಯ ವಯಸ್ಸಿನಲ್ಲಿಯೇ ಮಕ್ಕಳಿಗೆ ಶಾಲೆಯಲ್ಲಿ ಇದನ್ನು ಮಾಡಿಸಬಹುದು.

ನೈಸರ್ಗಿಕ ವಸ್ತುಗಳಾದ ಜೇಡಿಮಣ್ಣು, ಬಿದಿರು, ಮರದ ತುಂಡುಗಳು, ತೆಂಗಿನ ಚಿಪ್ಪು, ಮರಗಳ ಒಣಗಿದ ಕಾಯಿಗಳು ಮತ್ತು ಇತರ ಮೋಹಕ ವಸ್ತುಗಳಾದ ಕಾಗದ, ದಾರ, ಬಟ್ಟೆ ಮತ್ತು ಮಣಿಗಳನ್ನು ಉಪಯೋಗಿಸಿ ಪ್ರಾಕೃತಿಕ ಮತ್ತು ಕೃತಕ ವಸ್ತುಗಳ ನಡುವಿನ ವ್ಯತ್ಯಾಸ ಮತ್ತು ಅವುಗಳ ಗುಣಮಟ್ಟದಲ್ಲಿನ ವ್ಯತ್ಯಾಸವನ್ನು ಅರ್ಥಮಾಡಿಸಿ ಕಲಿಕೆಯನ್ನು ಆನಂದದಾಯಕ ವಾಗಿಸಬಹುದು.

ಮಕ್ಕಳ ಆಲೋಚನೆಗಳು ಮತ್ತು ಕಲ್ಪನೆಗಳನ್ನು ಹೊರತರಲು ಜೇಡಿಮಣ್ಣನ್ನು ಒಂದು ಪ್ರಮುಖವಾದ ಮಾಧ್ಯಮವನ್ನಾಗಿ ಕಲಾ ಕೇಂದ್ರದಲ್ಲಿ ಸುಲಭವಾಗಿ ಉಪಯೋಗಿಸಬಹುದು. ಇದು ಬಹಳ ನಮ್ಯ ವಸ್ತುವಾಗಿದ್ದು ಏನನ್ನಾದರೂ ನಿರ್ಮಿಸಲು, ಕಟ್ಟಲು, ವಿನ್ಯಾಸಗೊಳಿಸಲು, ಅಚ್ಚು ಹಾಕಲು, ಉಂಡೆಮಾಡಲು, ಪುನಃ ಹೊಂದಿಸಲು, ಪುನರ್ಬಳಕೆ ಹಾಗೂ ಮಾಡಿದ್ದನ್ನು ಸಂಪೂರ್ಣ ಒಡೆದು ಯಾವುದೇ ತೊಂದರೆ ಇಲ್ಲದೇ ಪುನಃ ಮೊದಲಿನಿಂದ ಪ್ರಾರಂಭಿಸಲು ಯಾರೇ ಆದರೂ ಬಳಸಿಕೊಳ್ಳುವ ಅವಕಾಶವಿದೆ. ಹೀಗೆ ಮಕ್ಕಳು ಮಾಡಿ ಆಡುವ ಸ್ಥಳವು ಕಡಿಮೆ ವೆಚ್ಚದ್ದಾಗಿದ್ದು, ಅತ್ಯಂತ ಕಡಿಮೆ ಸಾಧನ-ಸಲಕರಣೆಗಳು ಬೇಕಾಗುತ್ತವೆ.

ಮೇಲಿನ ವಿಷಯವನ್ನು ಸ್ವಲ್ಪ ಬದಿಗಿಟ್ಟು ಲವಲವಿಕೆಯ,



ಹುರುಪು ಉತ್ಸಾಹದ ಮತ್ತು ಮುಕ್ತ ಕಲಿಕಾ ಪರಿಸರ ಹೇಗೆ ಉಂಟಾಗುತ್ತದೆ ಎಂದು ನೋಡೋಣ, ಇದು ಬಹಳ ಮುಖ್ಯ ಏಕೆಂದರೆ ಕಲಿಕೆಯನ್ನು ಸಾಮಾನ್ಯವಾಗಿ ಒಂದಿಷ್ಟು ಕೌಶಲ್ಯ ಮತ್ತು ಜ್ಞಾನವನ್ನು ಗಳಿಸುವ ಹಾಗೂ ಮನದಟ್ಟು ಮಾಡಿಕೊಳ್ಳುವ ಕಾರ್ಯ ಎಂದು ನೋಡಲಾಗುತ್ತದೆ. ನಾವು ಈ ಸೀಮಿತ ಬಳಕೆಯನ್ನು ಮೀರಿ ಕಲಿಕೆಯ ಇನ್ನಿತರ ಪ್ರಮುಖವಾದ ಗುಣಗಳಾದ ಯಾಕೆ ಹೀಗೆ? ಎಂದು ಸಂಶಯಪಟ್ಟು ಪ್ರಶ್ನೆಗಳನ್ನು ಕೇಳುವ ಅವಕಾಶವನ್ನು ನೀಡುವುದು, ನಮ್ಮ ಸಂಬಂಧಗಳನ್ನು ಅರಿತಿರುವುದು, ಕೆಲಸ ಮಾಡುವಾಗ ಮಗು ಹೆದರುತ್ತಾನೋ ಅಥವಾ ಕಟ್ಟುಪಾಡು ಲೆಕ್ಕಿಸದೆ ಕೆಲಸಮಾಡಲು ಅವಕಾಶವಿದೆಯೇ ಮತ್ತು ಬಲವಂತ ಮಾಡದೇ ಅನಗತ್ಯ ಶಿಸ್ತು ಮತ್ತು ಒಬ್ಬರನ್ನಿನ್ನೊಬ್ಬರಿಗೆ ಹೋಲಿಕೆ ಮಾಡದೆ ಕೆಲಸಮಾಡಲು ಅವಕಾಶವಿದೆಯೇ ಇಂತಹವುಗಳ ಬಗ್ಗೆ ಗಮನ ನೀಡಬೇಕಾಗುತ್ತದೆ.

ಹಸ್ತಕಲೆ ಮತ್ತು ಜೇಡಿಮಣ್ಣಿನ ಚಟುವಟಿಕೆಗೆ ಸ್ಟುಡಿಯೋದಲ್ಲಿ ಈ ಎಲ್ಲಾ ಅಂಶಗಳನ್ನು ಒಗ್ಗೂಡಿಸಿ ಒಂದು ಶ್ರೀಮಂತ ಅನುಭವವನ್ನು ನೀಡುವ ವಾತಾವರಣವನ್ನು ಹೇಗೆ ಮತ್ತು ಯಾವಾಗ ಸೃಷ್ಟಿಸಬಹುದು ಎಂದು ಚರ್ಚಿಸುವುದು ಒಂದು ಉಪಯುಕ್ತ ಅಧ್ಯಯನವಾಗುತ್ತದೆ. ಬನ್ನಿ ! ನಾವು ಅವಶ್ಯ ಅಂಶಗಳನ್ನು ತರಗತಿಯಲ್ಲಿ ಅಳವಡಿಸಿ ಅಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ಪರಿಹರಿಸಲು ಸಾಧ್ಯವಾಗುವಂತೆ ಶಿಕ್ಷಕರನ್ನು ಹೇಗೆ ಸಶಕ್ತಗೊಳಿಸ ಬಹುದು ಎಂದು ನೋಡೋಣ.

## ಜವಾಬ್ದಾರಿಯೊಂದಿಗೆ ಕೆಲಸಮಾಡಲು ಆಸಕ್ತಿಯಿಂದ ಮುಂಬರುವ ಪ್ರವೃತ್ತಿ

ಮಾಡಿ ಕಲಿಯುವ ಸ್ಥಳಗಳಲ್ಲಿ ತಮ್ಮ ಆಲೋಚನೆಗಳ ಅಭಿವ್ಯಕ್ತಿಯಲ್ಲಿ ಶಿಕ್ಷಕರ ಬೆಂಬಲವಿಲ್ಲದೇ ತೊಡಗಿಕೊಳ್ಳಲು ಮತ್ತು ಖುದ್ದಾಗಿ ಅಥವಾ ಗುಂಪಿನಲ್ಲಿ ಕೆಲಸಮಾಡಲು ಮಕ್ಕಳಲ್ಲಿ ಸಾಕಷ್ಟು ಸ್ವಪ್ರೇರಣೆ ಬೇಕಾಗುತ್ತದೆ. ಇಲ್ಲಿ ಶಿಕ್ಷಕರ ಪಾತ್ರವು ಏನಿದ್ದರೂ ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆಯೇ, ನೀಡಿರುವ ಕಾರ್ಯಕ್ಕೆ ಸ್ಪಂದಿಸುತ್ತಿದ್ದಾರೆಯೇ ಮತ್ತು ಶಾಂತವಾಗಿ, ಆದರೆ ತಮ್ಮಲ್ಲಿರುವ ಶಕ್ತಿಯನ್ನು ಕ್ರಿಯಾತ್ಮಕವಾಗಿ ಬಳಸಿಕೊಳ್ಳುತ್ತಿದ್ದಾರೆಯೇ ಎನ್ನುವುದನ್ನು ನೋಡಿಕೊಳ್ಳುವುದಾಗಿರುತ್ತದೆ. ಹೀಗಿದ್ದರೂ ಅಲ್ಲಲ್ಲಿ ತಮ್ಮ ವಿಚಾರ ಮತ್ತು ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಏಕೆಂದರೆ ಮಕ್ಕಳಲ್ಲಿ ಹೊಸ ಆಲೋಚನೆಗಳು ಹಾಗೂ ತಂತ್ರಗಳು ಹೊರಹೊಮ್ಮುವುದಕ್ಕೆ ಇದು ಅತ್ಯಂತ ಆವಶ್ಯಕ.

## ಸಮಸ್ಯೆಗಳನ್ನು ಹಂಚಿಕೊಂಡು ಪರಿಹಾರ ಕಂಡು-ಕೊಳ್ಳಲು ಚರ್ಚೆ ಮತ್ತು ಸಂವಾದದ ಬಳಕೆ

ನಡವಳಿಕೆ, ಸಂಬಂಧಗಳು ಮತ್ತು ಒಬ್ಬರೊಂದಿಗೆ ಇನ್ನೊಬ್ಬರು ತಮ್ಮ ಕಾರ್ಯಗಳು, ಆಲೋಚನೆಗಳನ್ನು ಹಂಚಿಕೊಳ್ಳಲು ಅನುವಾಗುವಂತೆ ತರಗತಿಯಲ್ಲಿ ಶಿಕ್ಷಕರು ಪ್ರಶ್ನೆಗಳನ್ನು ಸೇರಿಸುವುದಕ್ಕೆ ಅವಕಾಶಗಳಿರುತ್ತವೆ ಮತ್ತು ಇದನ್ನು ಮಾಡುವಾಗ ಯಾವುದಾದರು ಒಂದಕ್ಕೆ ಮಾತ್ರ ಪ್ರಾಮುಖ್ಯತೆಯನ್ನು ನೀಡದೇ ಅತ್ಯಂತ ಸೂಕ್ಷ್ಮವಾಗಿ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

ಗದರಿಸಿ ಬೆದರಿಸಿ ಪರಿಹರಿಸದೆ, ಸಮಸ್ಯೆಗಳನ್ನು ಮತ್ತು ವಿಷಯಗಳನ್ನು ಚರ್ಚಿಸಿ ಪರಿಹರಿಸಿಕೊಳ್ಳಲು ಮುಂದಾದಲ್ಲಿ ಒಬ್ಬರೊಡನೆ ಮತ್ತೊಬ್ಬರು ವಿಚಾರ ವಿನಿಮಯದಲ್ಲಿ ಸಂವಾದವು ಒಂದು ಮೌಲ್ಯಯುತ ಪಾತ್ರವನ್ನು ವಹಿಸುತ್ತದೆ. ಪರಿಣಾಮಕಾರಿ ಕಲಿಕೆಯ ಸುಲಭವಾದ ಹರಿವಿಗೆ ಅಡಚಣೆಯಾಗಿರುವ ಅಥವಾ ತಡೆಯೊಡ್ಡುತ್ತಿರುವ ಯಾವುದೇ ವಿಷಯವನ್ನು ತರಗತಿಯ ಪ್ರಾರಂಭದಲ್ಲಿ ಅಥವಾ ತರಗತಿ ನಡೆಯುತ್ತಿರುವಾಗ ಒಂದು ಸೂಕ್ತವಾದ ಸಮಯದಲ್ಲಿ ಚರ್ಚಿಸಲು ಅವಕಾಶವನ್ನು ಮಾಡಿಕೊಡಬಹುದು.

## ಆತ್ಮೀಯ ವಾತಾವರಣ

ಈ ಹಸ್ತಕಲಾ ಕೇಂದ್ರಗಳಲ್ಲಿ ಪ್ರತಿ ವಿದ್ಯಾರ್ಥಿಯೂ ಮತ್ತೊಬ್ಬರ ಸಾಮರ್ಥ್ಯ ಅಥವಾ ಪ್ರತಿಭೆಯ ಬಗ್ಗೆ ವಿಮರ್ಶೆ ಅಥವಾ ಮೆಚ್ಚುಗೆಯನ್ನು ನೀಡಲು ತೊಡಗುವುದರಿಂದ ಇಲ್ಲಿ ಅನೇಕ ಬಗೆಯ ಆಲೋಚನೆಗಳು ಮತ್ತು ಪ್ರತಿಕ್ರಿಯೆಗಳ ವಿನಿಮಯಕ್ಕೆ ಹೆಚ್ಚಿನ ಅವಕಾಶವಿರುತ್ತದೆ. ಪ್ರತಿಯೊಬ್ಬರೂ ಈ ಕಾರ್ಯವನ್ನು ಅಕ್ಕರೆಯಿಂದ, ಯಾರನ್ನೂ ಹೋಲಿಸದೆ ಮತ್ತು ಪಕ್ಷಪಾತ ಅಥವಾ ತಿರಸ್ಕಾರವಿಲ್ಲದೇ ಮಾಡುವಂತೆ ಇಲ್ಲಿ ಶಿಕ್ಷಕರು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಮುಕ್ತ ಮತ್ತು ಪೂರ್ವಾಗ್ರಹವಿಲ್ಲದ ಪರಿಸರ ಇರಬೇಕು ಎಂಬ ಮುಖ್ಯ ಉದ್ದೇಶವೇ ಇಲ್ಲಿ ಸೋಲುತ್ತದೆ.

ಮಕ್ಕಳು ಭಾವೋದ್ವೇಗಕ್ಕೆ ಒಳಗಾಗಬಹುದಾದಂತಹ ಅನೇಕ ಸಂದರ್ಭಗಳ ಬಗ್ಗೆ ಮತ್ತು ಅದನ್ನು ಅವರು ಹೇಗೆ ವ್ಯಕ್ತಪಡಿಸುತ್ತಿದ್ದಾರೆ ಅಥವಾ ಹೊರಹಾಕುತ್ತಾರೆ ಎನ್ನುವುದರ ಬಗ್ಗೆ ಶಿಕ್ಷಕರು ಅತ್ಯಂತ ಎಚ್ಚರಿಕೆಯಿಂದ ಅರಿತಿರಬೇಕಾಗುತ್ತದೆ. ಶಿಕ್ಷಕರು ತಮ್ಮ ವಿಷಯ ವಸ್ತುವನ್ನು ಬೋಧಿಸಲು ತಾನು ಹೇಳಿದಂತೆಯೇ ಆಗಬೇಕು ಎಂದು ಹೊರಟರೆ ಈ ಎಚ್ಚರಿಕೆ ಇಲ್ಲವಾಗುತ್ತದೆ.

ವಿದ್ಯಾರ್ಥಿಗಳನ್ನು ಒಬ್ಬರೊಡನೆ ಮತ್ತೊಬ್ಬರು ಕಲೆತು ಕಾರ್ಯವೆಸಗುವ ಉತ್ಸಾಹದಿಂದ ತಮ್ಮಷ್ಟಕ್ಕೆ ತಾವೇ ಕೆಲಸ ಮಾಡಲು ಬಿಟ್ಟಾಗ ವಿದ್ಯಾರ್ಥಿಗಳ ಆಂತರಿಕ ಚೈತನ್ಯವನ್ನು ಗಮನಿಸಲು ಇದೊಂದು ಉತ್ತಮವಾದ ಸಂದರ್ಭವಾಗಿರುತ್ತದೆ. ನಿರಂತರವಾಗಿ ನಿಯಂತ್ರಣಕ್ಕೆ ಒಳಪಡಿಸುವ ಕಾರ್ಯತಂತ್ರವು ಕಾಳಜಿಯನ್ನು ವ್ಯಕ್ತಪಡಿಸುವುದಕ್ಕೆ ಅಡ್ಡಿಯಾಗುತ್ತದೆ. ವಿದ್ಯಾರ್ಥಿಗಳಿಗೆ ಶಿಕ್ಷಕರು ಪದೇ-ಪದೇ ನೆನಪಿಸುವುದು ಮತ್ತು ನಿಗಾವಹಿಸುವುದನ್ನು ಮಾಡದೆ ಅವರ ಕಾರ್ಯದಲ್ಲಿ ಶಾಂತಿ ಮತ್ತು ಬಿರುಸನ್ನು ಹೇಗೆ ತರುವುದು? ಶಿಕ್ಷಕರಿಗೆ ಇದೊಂದು ನಿರಂತರವಾದ ಸವಾಲಾಗಿರುತ್ತದೆ. ಈ ವಿನ್ಯಾಸವನ್ನು ಅರಿತುಕೊಳ್ಳಲು ಮಕ್ಕಳನ್ನು ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳುವುದು ಶಿಕ್ಷಕರಿಗೆ ಹೊಸತನವನ್ನು ನೀಡುತ್ತದೆ.

## ಮೌಲ್ಯಮಾಪನ ಮತ್ತು ಹಿಮ್ಮಾಹಿತಿ

ಯಾವದೇ ಕಲೆ ಮತ್ತು ಕುಶಲಕಲೆ ನೋಡಿದಾಕ್ಷಣ ಅದರ ಬಗ್ಗೆ ಚೆನ್ನಾಗಿದೆ, ಉತ್ತಮವಾಗಿದೆ, ಚೆನ್ನಾಗಿಲ್ಲ, ಸುಂದರವಾಗಿದೆ, ಅತ್ಯಂತ ಸುಂದರವಾಗಿದೆ, ಥೇಟ್ ಅದರಂತೆಯೇ ಕಾಣುತ್ತದೆ,

ಆಹಾ ಅದ್ಭುತವಾಗಿದೆ, ಎಂದು ಅಭಿಪ್ರಾಯ ನೀಡುತ್ತಾರೆ. ಇಂಥ ಅಭಿಪ್ರಾಯಗಳನ್ನು ವಾಸ್ತವವಾಗಿ ಅಥವಾ ವಸ್ತುನಿಷ್ಠವಾಗಿ ಯಾವುದೇ ಹೀಗಳಿಕೆ ಇಲ್ಲದೆ ಅಥವಾ ಅತಿಶಯೋಕ್ತಿಗಳಿಲ್ಲದೇ ವಿಮರ್ಶಾತ್ಮಕ ಮೆಚ್ಚುಗೆಯ ಪ್ರತಿಕ್ರಿಯೆಯಾಗಿ ಹೇಗೆ ಕೊಡಬಹುದು? ಇದೊಂದು ಕಷ್ಟವಾದ ಅಂಶ ಆದರೆ ಇದನ್ನು ನಿರ್ಲಕ್ಷಿಸುವಂತಿಲ್ಲ.ಇಂಥ ಮೌಲ್ಯಮಾಪನದಿಂದ ಮಕ್ಕಳ ಮನಮುದುಡಬಹುದು ಅವರ ಕ್ರಿಯಾಶೀಲತೆಯ ಮತ್ತು ಸಾಮರ್ಥ್ಯ ಕುಂಠಿತವಾಗಬಹುದು.

ಮಕ್ಕಳು ಮಾಡಿರುವ ಯಾವುದೇ ಕಾರ್ಯದ ಬಗ್ಗೆ ಶಿಕ್ಷಕರು ಹೇಗೆ ತೀರ್ಮಾನಕ್ಕೆ ಬರುತ್ತಾರೆ ಮತ್ತು ಅವರ ಯಾವುದೇ ಕಾರ್ಯಕ್ಕೆ ಹೇಗೆ ಮೌಲ್ಯವನ್ನು ನೀಡುವರು? ಇದೊಂದು ಬಹು ಚರ್ಚಿತ ಮತ್ತು ಗೊಂದಲಮಯ ವಿಷಯವಾಗಿದ್ದು ಇದಕ್ಕೆ ಯಾವುದೇ ಸಿದ್ಧ ಉತ್ತರ ಅಥವಾ ವಿಧಾನವಿಲ್ಲ. ಶಿಕ್ಷಕರು/ಹಿರಿಯರು ಮಕ್ಕಳ/ವಿದ್ಯಾರ್ಥಿಗಳ ಕಾರ್ಯವನ್ನು ನೋಡುವ ವಿಧಾನದಲ್ಲಿ ಎಲ್ಲಿಯೋ ತಪ್ಪಿದ್ದು, ಅವರು ತಮ್ಮ ನೈಪುಣ್ಯವನ್ನು ಗುರುತಿಸಿಕೊಳ್ಳಲು ಮೇಲ್ಮಟ್ಟಕ್ಕೆ ತಮಗೆ ಅನುಕೂಲವೆನಿಸಿದಂತೆ ತ್ವರಿತವಾಗಿ ಮಾಲ್ಯಮಾಪನವನ್ನು ಮಾಡುವತ್ತ ಒಲವು ಹೊಂದಿರುವುದು ಸುಸ್ಪಷ್ಟವಾಗಿ ಕಾಣುತ್ತದೆ.

ಪ್ರತಿಯೊಬ್ಬರ ಕೆಲಸ ಪ್ರತಿಯೊಬ್ಬರಿಗೂ ಕಾಣುವಂತೆ ಪ್ರದರ್ಶಿಸಲು ಸಾಕಷ್ಟು ಸ್ಥಳವನ್ನು ಒದಗಿಸುವುದು ಈ ಸಮಯದಲ್ಲಿ ಇದನ್ನು ಪರಿಹರಿಸಲು ಇರುವ ಒಂದು ಸರಳ ಮಾರ್ಗವಾಗಿದೆ. ಪ್ರತಿಯೊಂದು ಮಗುವೂ ಯಾವುದಾದರೊಂದು ಕಲೆ ಅಥವಾ ಕರಕುಶಲ ಕಲೆಯ ವಸ್ತುವನ್ನು ತಯಾರಿಸಿದ ಅನಂತರ ತನ್ನ ಆಲೋಚನೆಗಳು ಮತ್ತು ಉದ್ದೇಶವನ್ನು ಹಂಚಿಕೊಳ್ಳಬಹುದು. ಅವರು ತಯಾರಿಸಿರುವ ಕಲಾ ವಸ್ತುಗಳನ್ನು ಯಾವುದೇ ಶ್ರೇಷ್ಠ ಅಥವಾ ಕನಿಷ್ಠ ಎನ್ನುವ ಶ್ರೇಣಿ ನೀಡಿಕೆಗೆ ಒಳಪಡಿಸದೇ ಪ್ರದರ್ಶನ ಮತ್ತು ಅದರ ಬಗ್ಗೆ ಚಿಂತನೆಗಳ ವಿನಿಮಯಕ್ಕೆ ಅವಕಾಶ ನೀಡಿದಾಗ ಈ ಮೇಲೆ ಹೇಳಿರುವ ವಿಧಾನವು ಉತ್ತಮವಾಗಿ ಕಾರ್ಯ ಮಾಡುತ್ತದೆ.

## ಪ್ರಕ್ರಿಯೆಯು ಫಲಿತಾಂಶವನ್ನು ಮೀರಿ ನಡೆಯುವುದು

ಯಾವುದೇ ಒಂದು ಆರೋಗ್ಯಕರ ಕಲಿಕಾ ವಾತಾವರಣವು ಮೂಡಬೇಕಾದರೆ ಅದು ಅಂತಿಮ ಫಲಿತಾಂಶದ ಬಗ್ಗೆ ಚಿಂತಿಸುವುದನ್ನು ಬಿಟ್ಟು ನಿರಂತರವಾಗಿ ಕಾರ್ಯ ಮಾಡುತ್ತಾ ಹೋಗುವ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ. ಪ್ರಯತ್ನಪಡಲು, ಪ್ರಯೋಗ ಮಾಡಲು, ತೊಂದರೆ ತೆಗೆದುಕೊಳ್ಳಲು ಮತ್ತು ಕೈಯಲ್ಲಿರುವ ಕೆಲಸದ ಬಗ್ಗೆ ಗಮನಹರಿಸಲು ಅಡ್ಡಿಯನ್ನು ತೋರದಿದ್ದಲ್ಲಿ, ಕಾರ್ಯ ಮಾಡುವ ಪ್ರಕ್ರಿಯೆಯಲ್ಲಿ ಯಾರಿಗಾದರೂ ಪರೀಕ್ಷೆಗೆ ಒಡ್ಡುವ ಸಾಧ್ಯತೆಗಳು ಕಡಿಮೆ.

ತಮ್ಮ ಕಾರ್ಯವನ್ನು ಪ್ರಾರಂಭಿಸಲು ಅವರಿಗಿರುವ ಅಡಚಣೆಗಳೇನು ಮತ್ತು ಎಲ್ಲ ಅಡ್ಡಿ ಆತಂಕಗಳಿವೆ ಎನ್ನುವುದನ್ನು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು ಮತ್ತು ಅವುಗಳನ್ನು ಕಂಡುಹಿಡಿಯಲು ಶಿಕ್ಷಕರು ವೇಗವರ್ಧಕವಾಗಿ ಕೆಲಸ ಮಾಡಬೇಕು.

ತಾನು ಮಾಡಿದ ಜೇಡಿಮಣ್ಣಿನ ಒಂದು ವಸ್ತುವನ್ನು ಒಬ್ಬ ವಿದ್ಯಾರ್ಥಿಯು ಬಹಳ ಜಾಗರೂಕತೆಯಿಂದ ಮತ್ತು ಕಾಳಜಿಯಿಂದ ಕಾಣುತ್ತಾನೆ/ಳೆ. ಅಂತಿಮ ಘಟ್ಟದಲ್ಲಿ ಅದು ಮುರಿಯುವುದು, ಪೂರ್ಣವಾದ ಅನಂತರ ಹಾಳಾದರೂ, ಫಲಿತಾಂಶವು ಪ್ರದರ್ಶನಕ್ಕೆ ಲಭ್ಯವಿಲ್ಲದಿದ್ದರೂ ಕಲಿಕಾ ಪ್ರಕ್ರಿಯೆ ಮತ್ತು ಅದು ನೀಡಿದ ಅನುಭವ ಬಹಳ ಮೌಲ್ಯಯುತವಾದ ಅನುಭವವಾಗಿರುತ್ತದೆ.

ಒಬ್ಬ ಶಿಕ್ಷಕರು ಈ ಎಲ್ಲಾ ಅಂಶಗಳು ಮತ್ತು ವಿಧಾನಗಳನ್ನು ಗಮನದಲ್ಲಿ ಇರಿಸಿಕೊಂಡಿದ್ದಾಗ ಮತ್ತು ಶ್ರದ್ಧಾಪೂರ್ವಕವಾಗಿ ಅದರ ಉದ್ದೇಶದ ಈಡೇರಿಕೆಗೆ ಕಾಳಜಿ ವಹಿಸಿದಾಗ ತರಗತಿಗಳಲ್ಲಿನ ಕಲಿಕಾ ವಾತಾವರಣವು ಖಂಡಿತವಾಗಿಯೂ ಉತ್ತಮವಾಗಿ ವರ್ಧಿಸುತ್ತದೆ. ಇದಕ್ಕೇ ಅಂಟಿಕೊಂಡಿರಬೇಕು ಎನ್ನುವ ಯಾವುದೇ ಒಂದು ನಿರ್ದಿಷ್ಟ ವಿಧಾನಗಳಿಲ್ಲ. ಆದರೆ ಯಾರೇ ಆದರೂ ತಮ್ಮ ಶಕ್ತಿಯನ್ನು ನಿರಂತರವಾಗಿ ಬಸಿದು ಇದಕ್ಕಾಗಿ ಶ್ರಮಿಸುತ್ತೇನೆ ಎಂದು ಅವರಿಗೆ ಅವರೇ ಬದ್ಧತೆಯನ್ನು ಹೊಂದಿರಬೇಕು ಮತ್ತು ಪ್ರತಿಯೊಂದು ಸನ್ನಿವೇಶವನ್ನೂ ಕುತೂಹಲದಿಂದ ಮತ್ತು ಧೃಡತೆಯಿಂದ ಕಾಣುವತ್ತ ಒಲವನ್ನು ತೋರಬೇಕಾಗುತ್ತದೆ.

ವಿಧಾನಗಳನ್ನು ಗಮನದಲ್ಲಿ ಇರಿಸಿಕೊಂಡಿದ್ದಾಗ ಮತ್ತು ಶ್ರದ್ಧಾಪೂರ್ವಕವಾಗಿ ಅದರ ಉದ್ದೇಶದ ಈಡೇರಿಕೆಗೆ ಕಾಳಜಿ ವಹಿಸಿದಾಗ ತರಗತಿಗಳಲ್ಲಿನ ಕಲಿಕಾ ವಾತಾವರಣವು ಖಂಡಿತವಾಗಿಯೂ ಉತ್ತಮವಾಗಿ ವರ್ಧಿಸುತ್ತದೆ. ಇದಕ್ಕೇ ಅಂಟಿಕೊಂಡಿರಬೇಕು ಎನ್ನುವ ಯಾವುದೇ ಒಂದು ನಿರ್ದಿಷ್ಟ ವಿಧಾನಗಳಿಲ್ಲ. ಆದರೆ ಯಾರೇ ಆದರೂ ತಮ್ಮ ಶಕ್ತಿಯನ್ನು ನಿರಂತರವಾಗಿ ಬಸಿದು ಇದಕ್ಕಾಗಿ ಶ್ರಮಿಸುತ್ತೇನೆ ಎಂದು ಅವರಿಗೆ ಅವರೇ ಬದ್ಧತೆಯನ್ನು ಹೊಂದಿರಬೇಕು ಮತ್ತು ಪ್ರತಿಯೊಂದು ಸನ್ನಿವೇಶವನ್ನೂ ಕುತೂಹಲದಿಂದ ಮತ್ತು ಧೃಡತೆಯಿಂದ ಕಾಣುವತ್ತ ಒಲವನ್ನು ತೋರಬೇಕಾಗುತ್ತದೆ.

"ಸ್ಪರ್ಧಾತ್ಮಕ ಮನೋಭಾವನೆಯನ್ನು ತೊಡೆದಾಗ ನಿಜವಾದ ಕಲಿಕೆ ಉಂಟಾಗುತ್ತದೆ." – **ಜೆ. ಕೃಷ್ಣಮೂರ್ತಿ**

"ಬಹಳಷ್ಟು ಕಲಿಕೆಯು ಯಾರೋ ಹೇಳಿಕೊಟ್ಟು ಕಲಿತದ್ದರಿಂದ ಬಂದದಲ್ಲ.ಇದು ಒಂದು ಅರ್ಥಪೂರ್ಣ ಪರಿಸರದಲ್ಲಿ ಅಡೆತಡೆಯಿಲ್ಲದೆ ಕಾರ್ಯನಿರ್ವಹಿಸುವುದರಿಂದ ಬರುತ್ತದೆ. ಬಹಳಷ್ಟು ಮಂದಿ ತಾವು ಅದರೊಂದಿಗೆ ಇರುವುದರಿಂದ ಚೆನ್ನಾಗಿ ಕಲಿಯುತ್ತಾರೆ. ಹೀಗಿದ್ದರೂ ಶಾಲೆಯುವಿಸ್ತೃತ ಯೋಜನೆ ಮತ್ತು ಹಸ್ತಕ್ಷೇಪ ನಡೆಸಿ ತಮ್ಮ ವೈಯಕ್ತಿಕ ಗ್ರಹಣಶಕ್ತಿಯ ಬೆಳವಣಿಗೆ ಗುರುತಿಸುವಂತೆ ಮಾಡುತ್ತದೆ." – **ಇವಾನ್ ಇಲ್ಲಿಚ್** ತನ್ನ Deschooling Society. ಪುಸ್ತಕದಲ್ಲಿ ಹೇಳುತ್ತಾನೆ



**ಲಲಿತ**ರವರು ದಿ ವ್ಯಾಲಿ ಸ್ಕೂಲ್‌ನಲ್ಲಿ ಮತ್ತು ಸೆಂಟರ್ ಫಾರ್ ಲರ್ನಿಂಗ್‌ನಲ್ಲಿ ಕಿರಿಯರ ಶಾಲೆಯಲ್ಲಿ ಮಕ್ಕಳೊಂದಿಗೆ ಕಾರ್ಯ ನಿರ್ವಹಿಸಿದ್ದಾರೆ. ವಸ್ತುಗಳೊಂದಿಗೆ ಕೆಲಸ ಮಾಡುವುದರಲ್ಲಿ ಆಸಕ್ತಿ ಮೂಡಿಸಲು ಮಕ್ಕಳಿಗಾಗಿ ಅವರು ಕರಕುಶಲ ಮತ್ತು ಮಣ್ಣಿನ ವಸ್ತು ತಯಾರಿಕೆಯ ಕೇಂದ್ರವನ್ನು ಸ್ಥಾಪಿಸುವಲ್ಲಿ ಆಸಕ್ತರಾದರು. ಪ್ರಸ್ತುತ, ಇವರು ಸಿಎಫ್‌ಎಲ್‌ನ ಪೂರ್ಣಾವಧಿ ವೃತ್ತಿ ಬದ್ಧತೆಯಿಂದ ನಿವೃತ್ತಿ ಹೊಂದಿದ್ದಾರೆ ಹಾಗೂ ಶಿಕ್ಷಣ ಮತ್ತು ಕಲಿಕೆಯ ಬಗ್ಗೆ ಮರು ಚಿಂತನೆ ಮಾಡುವಲ್ಲಿ ಆಸಕ್ತಿಯುಳ್ಳ ಶಾಲೆಗಳು ಮತ್ತು ಗುಂಪುಗಳೊಂದಿಗೆ ತಮ್ಮ ಕಾರ್ಯವನ್ನು ಮುಂದುವರೆಸುತ್ತಿದ್ದಾರೆ. ಇವರನ್ನು lalita.manjunath@gmail.com ಇಲ್ಲಿ ಸಂಪರ್ಕಿಸಬಹುದು.

